# ಬ್ರಹ್ಮಜ್ಞಾನ



ಬ್ರಹ್ಮಜ್ಞಾನಕ್ಕೆ ಅಧಿಕಾರಿಗಳು ಬಹಳ ಕಡಿಮೆ. ಗೀತೆಯಲ್ಲಿ ಹೇಳಿದೆ: "ಸಹಸ್ರ ಸಹಸ್ರ ಜನರಲ್ಲಿ ಎಲ್ಲೋ ಒಬ್ಬ ಬ್ರಹ್ಮಜ್ಞಾನಕ್ಕಾಗಿ ಹಾತೊರೆಯುತ್ತಾನೆ. ಈ ರೀತಿಯಾಗಿ ಹಾತೊರೆಯತಕ್ಕ ಸಹಸ್ರ ಜನರಲ್ಲಿ ಎಲ್ಲೋ ಒಬ್ಬನಿಗೆ ಮಾತ್ರ ಬ್ರಹ್ಮಜ್ಞಾನ ದೊರೆಯಬಹುದು" ಎಂಬುದಾಗಿ.

ಸಾಧನೆಯ ಸಮಯದಲ್ಲಿ ಈ ಜಗತ್ತು "ಮಾಯೆಯ ಚೌಕಟ್ಟಾಗಿ" ಕಾಣುತ್ತದೆ. ಆದರೆ ಬ್ರಹ್ಮಜ್ಞಾನ ದೊರೆತನಂತರ ಇದೇ ಜಗತ್ತು "ಮೋಜಿನ ಮನೆ"ಯಾಗಿ ಕಾಣುತ್ತದೆ.

ಬ್ರಹ್ಮಜ್ಞಾನ ದೊರೆತ ನಂತರವೂ ಸಾಕಾರವಾದಿ ಪರಮಹಂಸರು ಲೋಕಶಿಕ್ಷಣಕ್ಕಾಗಿ ಭಕ್ತಿಯನ್ನು ಆಶ್ರಯಿಸಿಕೊಂಡು ಬದುಕಿರುತ್ತಾರೆ: ಇಂಥವರು ತುಂಬಿದ ಕೊಡ ಇದ್ದ ಹಾಗೆ. ತಮ್ಮ ಕೊಡದಿಂದ ಉಳಿದ ಪಾತ್ರೆಗಳಿಗೆ ನೀರು ಹಂಚುತ್ತಿರುತ್ತಾರೆ. ಇವರು ತಾವು ಏನೇನು ಸಾಧನೆ ಮಾಡಿ ಭಗವಂತನ ಸಾಕ್ಷಾತ್ಕಾರ ಪಡೆದರೋ, ಆ ವಿಷಯಗಳನ್ನೆಲ್ಲ ಲೋಕಶಿಕ್ಷಣಕ್ಕಾಗಿ ಲೋಕಹಿತಕ್ಕಾಗಿ ಬೋಧಿಸುತ್ತಾರೆ. ಜನ ಬಹಳ ಶ್ರಮವಹಿಸಿ ಕುಡಿಯುವ ನೀರಿಗೆಂದು ಬಾವಿ ತೋಡುತ್ತಾರೆ—ಹಾರೆ, ಗುದ್ದಲಿ, ಕುಕ್ಕೆ ಇವನ್ನು ಉಪಯೋಗಿಸಿ. ನೀರು ದೊರೆತನಂತರ ಕೆಲವರು ಹಾರೆ, ಗುದ್ದಲಿ, ಕುಕ್ಕೆ ಎಲ್ಲವನ್ನೂ ಬಾವಿಯೊಳಗೇ ಬಿಟ್ಟುಬಿಡುತ್ತಾರೆ. ಇನ್ನು ಕೆಲವರು ಅವನ್ನು ಇಟ್ಟಿರುತ್ತಾರೆ—ಪರರ ಉಪಯೋಗಕ್ಕೆ ಬರಲೆಂದು.

ಕೆಲವರು ಮುಚ್ಚುಮರೆಯಲ್ಲಿ ಮಾವಿನ ಹಣ್ಣನ್ನು ತಿನ್ನುವುದೂ ಅಲ್ಲದೆ, ಅದರ ಚಿಹ್ನೆಯೇ ಇಲ್ಲದ ರೀತಿಯಲ್ಲಿ ಬಾಯಿ ಒರಸಿಕೊಂಡುಬಿಡುತ್ತಾರೆ. ಇನ್ನು ಕೆಲವರು ಇತರರಿಗೂ ಹಂಚಿ ತಾವೂ ತಿನ್ನುತ್ತಾರೆ—ಲೋಕಶಿಕ್ಷಣಕ್ಕಾಗಿ, ಭಗವದ್ರಸವನ್ನು ಸವಿಯಲಿಕ್ಕಾಗಿ. "ಸಕ್ಕರೆ ತಿನ್ನಬೇಕು ಅಂತ ಇಚ್ಛೆ. ಸಕ್ಕರೆ ಆಗಬೇಕು ಅಂತ ಇಚ್ಛೆಯಿಲ್ಲ."

ಗೋಪಿಯರಿಗೂ ಬ್ರಹ್ಮಜ್ಞಾನ ಮುಡಿಪಾಗಿತ್ತು. ಆದರೆ ಅವರಿಗೆ ಅದು ಬೇಡವಾಗಿತ್ತು. ಅವರು ವಾತ್ಸಲ್ಯಭಾವದಿಂದಲೊ, ಸಖ್ಯಭಾವದಿಂದಲೊ, ಮಧುರಭಾವದಿಂದಲೊ ಅಥವಾ ದಾಸೀಭಾವದಿಂದಲೊ ಭಗವಂತನೊಡನೆ ಆನಂದ ಪಡಬೇಕೆಂದು ಇಚ್ಛಿಸುತ್ತಿದ್ದರು.

ನಾರದ, ಸನಕ, ಸನಂದ, ಸನಾತನ, ಸನತ್ಕುಮಾರ ಇವರೇ ಮೊದಲಾದವರು ಬ್ರಹ್ಮಜ್ಞಾನ ದೊರೆತ ನಂತರ "ದಾಸ ಅಹಂ" "ಭಕ್ತ ಅಹಂ" ಇಟ್ಟುಕೊಂಡಿದ್ದರು. ಇವರು ಹಡಗಿನ ಹಾಗೆ. ತಾವೇ ಈ ಭವಸಾಗರವನ್ನು ದಾಟುವುದಲ್ಲದೆ ಅನೇಕರನ್ನೂ ಹೊತ್ತು ದಾಟಿಸಬಲ್ಲರು.

ಅನೇಕರು ಬ್ರಹ್ಮಜ್ಞಾನದ ವಿಷಯವಾಗಿ ಮಾತಾಡುತ್ತಾರೆ. ಆದರೆ ಅವರ ಮನಸ್ಸು ಪ್ರಾಪಂಚಿಕ ವಸ್ತುಗಳ ಕಡೆಗೆ—ಮನೆ, ಮಠ, ಹಣ, ಕೀರ್ತಿ, ಇಂದ್ರಿಯಸುಖ ಇವುಗಳ ಕಡೆಗೆ ಹರಿದು ಹೋಗಿರುತ್ತದೆ. ಸ್ಮಾರಕ ಸ್ತಂಭದ (ಕೊಲ್ಕತಾದಲ್ಲಿರುವ ಆಕ್ಟರ್ ಲೋನಿ ಮಾನ್ಯುಮೆಂಟ್) ಕೆಳಗಡೆ ನಿಂತಿರುವವರೆಗೆ ಗಾಡಿ, ಕುದುರೆ, ಆಂಗ್ಲಪುರುಷರು ಮತ್ತು ಮಹಿಳೆಯರು ಇತ್ಯಾದಿಗಳನ್ನು ನೋಡಬಹುದು. ಆದರೆ, ಅದರ ಮೇಲಕ್ಕೆ ಹತ್ತಿದರೆ ಆಗ ಕಾಣುತ್ತದೆ, ಆಕಾಶ ಮತ್ತು ಸಮುದ್ರ ಸುಮ್ಮನೆ ವಿಶಾಲವಾಗಿ ಹಬ್ಬಿಕೊಂಡಿರುವುದು. ಆಗ ಮನೆ, ಕುದುರೆ, ಗಾಡಿ, ಮನುಷ್ಯರು ಇವು ಯಾವುವೂ ಹಿಡಿಸವು. ಅವೆಲ್ಲಾ ಇರುವೆಗಳ ಹಾಗೆ ಕಾಣುತ್ತವೆ

ಬ್ರಹ್ಮಜ್ಞಾನ ದೊರೆಯಿತು ಎಂದರೆ ಸಂಸಾರಾಸಕ್ತಿ, ಕಾಮಕಾಂಚನದಲ್ಲಿ ಉತ್ಸಾಹ ಇವೆಲ್ಲ ಹೊರಟುಹೋಗುತ್ತವೆ. ಎಲ್ಲವೂ ಶಾಂತಮಯವಾಗಿಬಿಡುತ್ತವೆ. ಸೌದೆ ಉರಿಯುವಾಗ ಅದು "ಪಟ್, ಪಟ್" ಅಂತ ಶಬ್ದ ಮಾಡುತ್ತದೆ, ಉರಿಯನ್ನೂ ನೋಡಬಹುದು. ಆದರೆ ಅದು ಉರಿದು ಬೂದಿ ಉಳಿದುಕೊಂಡಾಗ ಯಾವ ಶಬ್ದವೂ ಇರದು. ಆಸಕ್ತಿ ಹೋಯಿತು ಎಂದರೆ ಉತ್ಸಾಹವೂ ಹೊರಟುಹೋಗುತ್ತದೆ. ಕೊನೆಗೆ ಶಾಂತಿ.

ಎಲ್ಲಿಯವರೆಗೆ ನಾನು ಎಂಬ ನೀರಿನಲ್ಲಿ ಸೂರ್ಯನನ್ನು ನೋಡಬೇಕಾಗಿರುವುದೊ ಮತ್ತು ಸೂರ್ಯನನ್ನು ನೋಡಲು ಬೇರೆ ಯಾವ ಮಾರ್ಗವೂ ಇಲ್ಲವೊ, ಎಲ್ಲಿಯವರೆಗೆ ಪ್ರತಿಬಿಂಬಿತ ಸೂರ್ಯನನ್ನು ವಿನಾ ನಿಜವಾದ ಸೂರ್ಯನನ್ನು ನೋಡಲು ಯಾವ ಉಪಾಯವೂ ಇಲ್ಲವೊ, ಅಲ್ಲಿಯವರೆಗೆ ರೂಪಾಯಿಗೆ ಹದಿನಾರಾಣೆ ಭಾಗ ಪ್ರತಿಬಿಂಬಿತ ಸೂರ್ಯನೇ ಸತ್ಯ. ಆ ಪ್ರತಿಬಿಂಬಿತ ಸೂರ್ಯನೇ ಆದ್ಯಾಶಕ್ತಿ.

ಬ್ರಹ್ಮಜ್ಞಾನ ಬೇಕಾಗಿದ್ದರೆ ಆ ಪ್ರತಿಬಿಂಬ ಸೂರ್ಯನನ್ನು ಹಿಡಿದುಕೊಂಡು ನಿಜವಾದ ಸೂರ್ಯನ ಕಡೆಗೆ ಹೋಗು. ನಮ್ಮ ಪ್ರಾರ್ಥನೆ ಕೇಳುತ್ತಾನಲ್ಲ ಆ ಸಗುಣ ಬ್ರಹ್ಮ, ಆತನನ್ನೇ ಕೇಳಿಕೊ, ಆತನೇ ಬ್ರಹ್ಮಜ್ಞಾನವನ್ನು ಕೊಡುತ್ತಾನೆ; ಹೇಗೆಂದರೆ ಯಾರು ಸಗುಣ ಬ್ರಹ್ಮನೊ ಆತನೇ ನಿರ್ಗುಣ ಬ್ರಹ್ಮ. ಯಾರು ಶಕ್ತಿಯೋ ಆತನೇ ಬ್ರಹ್ಮ. ಪೂರ್ಣಜ್ಞಾನ ದೊರೆತಮೇಲೆ ಈ ಅಭಿನ್ನತೆಯ ಅನುಭವ.

**ಶ್ರೀರಾಮಕೃಷ್ಣ ವಚನವೇದ** ದಿಂದ